# ಆತ್ಮಸಮರ್ಪಣೆ

ಎಸ್.ಎಸ್. ನೀರಗಟ್ಟಿ

*ಮಾಗಿದ ಹಣ್ಣೇ ದೇವರ ನೈವೇದ್ಯಕ್ಕೆ ಯೋಗ್ಯವಾದುದು. ಹಾಗೆಯೇ ನಮ್ಮ ಮನಸ್ಸೂ ಪರಿಪಕ್ವವಾಗಬೇಕೆಂದು ಹೇಳುತ್ತಾರೆ ಬೆಳಗಾವಿ ನಿವಾಸಿಗಳಾದ ಶ್ರೀ ನೀರಗಟ್ಟಿಯವರು.*

**ಆ**ತ್ಮಸಮರ್ಪಣೆಯೆಂದರೆ ಅದೊಂದು ಮಾಗಿದ ಮನಸ್ಸಿನ ಪರಿಪಕ್ವತೆಯ ಕುರುಹು, ದೇವರ ನಿರ್ಣಯಕ್ಕೆ ತಲೆಬಾಗಿ ಅದನ್ನು ಮನಸಾ ಅನುಸರಿಸುವ ಒಂದು ಅದಮ್ಯ ನಿಷ್ಠೆ, ವಿರಾಗದ ಒಂದು ಗುರುತರ ಭಾವ. ದೇವರ ಸನ್ನಿಧಾನಕ್ಕೆ ಸಮೀಪಿಸಲು ಒಂದು ಸುಲಭಮಾರ್ಗವೇ ಆತ್ಮಸಮರ್ಪಣೆ.

ಪ್ರಪಂಚದಲ್ಲಿ ಹುಟ್ಟು ಮತ್ತು ಸಾವು ಈ ಅವಿನಾಭಾವ ಸಂಗತಿಗಳು ಮನುಷ್ಯನ ಅಧೀನದಲ್ಲಿಲ್ಲ. ಆದರೆ ಏತನ್ಮಧ್ಯೆ ಎಂತೋ ಬಾಳಿ ಬದುಕುವ ನಾಲ್ಕುದಿನದ ಉಡಾಫೆ ಜೀವನದ ಚುಕ್ಕಾಣಿ ಮಾತ್ರ ತನ್ನ ಕೈಯಲ್ಲೇ ಇದೆಯೆಂಬ ಹುಟ್ಟು ಭ್ರಮೆ ಮನುಷ್ಯಪ್ರಾಣಿಗೆ ಈ ಮಾಯಾವಿ ಭ್ರಮೆಯೇ ಮನುಷ್ಯನನ್ನು ಆಶೆನಿರಾಶೆಗಳ ದ್ವಿವಿಧ ರಂಗಿನಲ್ಲಿ ಅದ್ದಿ ಅವನನ್ನು ಆಶಾವಾದಿ ಇಲ್ಲವೆ ನಿರಾಶಾವಾದಿಯನ್ನಾಗಿ ರೂಪಿಸುತ್ತದೆ. ಆಶಾವಾದಿ ತನ್ನ ಸ್ವಪ್ರಯತ್ನದ ಜೋರಿನಿಂದ ಜೀವನದಲ್ಲಿ ಏನನ್ನಾದರೂ ಸಾಧಿಸಲು ಶಕ್ತನೆಂದು ಕನಸು ಕಾಣುತ್ತಾನೆ. ಆದರೆ ಸ್ವಪ್ರಯತ್ನಕ್ಕೂ ತನ್ನದೇ ಆದ ಇತಿಮಿತಿ ಹಾಗೂ ಇಕ್ಕಟ್ಟುಗಳಿದ್ದು ಅದು ನೂರಕ್ಕೆ ನೂರುಪಾಲು ಯಶ ಕಾಣಿಸದು. ಪ್ರತಿ ಕಾರ್ಯವೂ ಸ್ವಪ್ರಯತ್ನದಿಂದಲೇ ಪೂರೈಸುತ್ತಿದ್ದರೆ ಪ್ರಪಂಚದಲ್ಲಿ ನಿರಾಶೆಗೆ ಎಡೆಯಿರುತ್ತಿರಲಿಲ್ಲ. ದೈವವೆಂಬ ಶಬ್ದ ಅರ್ಥಹೀನವಾಗಿ ಮನುಷ್ಯ ಮತ್ತು ದೇವರಲ್ಲಿ ಅಂತರ ಉಳಿಯುತ್ತಿರಲಿಲ್ಲ.

ಹಾಗೆ ವಿಚಾರಿಸಿ ನೋಡಿದರೆ ಸ್ವಪ್ರಯತ್ನಕ್ಕೆ ಬೆಂಗಾವಲಾಗಿ ಒದಗುವ ಪ್ರತಿಸ್ಫೂರ್ತಿ, ಚಾಣಾಕ್ಷತೆ, ಸಮಯಪ್ರಜ್ಞೆ, ಶಕ್ತಿ ಸಾಮರ್ಥ್ಯ ಮತ್ತು ಅದನ್ನು ಸಿದ್ಧಿಸುವ ತಂತ್ರ ಇವಕ್ಕೆಲ್ಲ ದೈವೀ ಶಕ್ತಿಯೆ ಪ್ರೇರಕವೆಂದರೆ ಅತಿಶಯೋಕ್ತಿಯೆನಿಸದು. ಇಲ್ಲದಿದ್ದರೆ ಎಷ್ಟೋ ವರ್ಷಗಳ ಕಾಲ ತನ್ನ ಬುದ್ಧಿಮತ್ತೆ, ಸಾಮರ್ಥ್ಯ ಮತ್ತು ಸಾಧನೆ ಬಲದಿಂದ ಪ್ರತಿಕಾರ್ಯದಲ್ಲೂ ಉತ್ಕ್ರಾಂತಿ ಹೊಂದುತ್ತಿದ್ದ ಒಬ್ಬ ಪ್ರತಿಭಾನ್ವಿತ ವ್ಯಕ್ತಿ ಒಂದು ದಿನ ದಿಢೀರನೆ ಆಕಾಶದಿಂದ ಕಳಚಿಬೀಳುವ ನಕ್ಷತ್ರದಂತೆ ನೆಲಕಚ್ಚುತ್ತಾನೆಂದರೆ ವಿಸ್ಮಯವಲ್ಲವೇ? "ತಾನೊಂದು ಬಗೆದರೆ ದೈವವೊಂದು ಬಗೆಯುತ್ತದೆ" ಎಂಬಂತೆ ಎಲ್ಲವೂ ನಾವು ಯೋಚಿಸಿದಂತೆಯೇ ಜರುಗವು.

ನಿಯತಿಯ ನಡುವಳಿಕೆ ತೀರ ಅಯೋಮಯ. ಅದರ ತಂತ್ರ ಕುತಂತ್ರಗಳ ಗತ್ತು ವಿಚಿತ್ರ. ಅದು ಎಸಗುವ ಪ್ರತಿಕಾರ್ಯ ನಮ್ಮ ಮಾನದಂಡಕ್ಕೆ ಹೊಂದುವ ಅಳತೆ, ತೂಕ ಮತ್ತು ಲೆಕ್ಕಾಚಾರಕ್ಕೆ ಕುದುರವು. ದೈವದ ಲೀಲೆ ಅಗಾಧ. ಅದಕ್ಕೆ ಉಪ್ಪರಿಗೆಯನ್ನು ತಿಪ್ಪರಿಗೆ, ತಿಪ್ಪರಿಗೆಯನ್ನು ಉಪ್ಪರಿಗೆಯನ್ನಾಗಿಸಲು ಕ್ಷಣ ಕೂಡ ಬೇಕಾಗದು. ದೈವದೊಂದಿಗೆ ಸೆಣಸಿ ಗೆದ್ದವರಿಲ್ಲ. ಅದನ್ನು ಉಪೇಕ್ಷಿಸಿ ಬಾಳಿದವರಿಲ್ಲ. ಸೋತು ಆಕಾಶದೆಡೆಗೆ ಕಣ್ಣು ಬಿಡುವುದಕ್ಕಿಂತಲೂ ಅನಿಶ್ಚಿತ ಹಾಗೂ ಅನುಗಾಲ ಅನುಗಾಯಿಯಾಗಿ ಬಾರದ ಸ್ವಪ್ರಯತ್ನದ ಪ್ರಲೋಭನೆಗೆ ಕಟ್ಟುಬೀಳದೆ ದೈವದೊಂದಿಗೆ ರಾಜಿಯಾಗುವುದೇ ಜ್ಞಾನಿಗಳ ಲಕ್ಷಣ. ಆದರೂ ಸ್ವಪ್ರಯತ್ನವನ್ನು ಬಿಡಬಾರದು. ಆದರೆ ಕೇವಲ ಸ್ವಪ್ರಯತ್ನದಿಂದಲೇ ಎಲ್ಲವೂ ಸಾಧ್ಯ ಎಂಬ ಭ್ರಮೆ ಸಲ್ಲ. ಬೇರೆ ಹಲವಾರು ಅಂಶಗಳಿವೆ ಎಂಬುದನ್ನು ಮರೆಯಬಾರದು.

**ಯಥಾ ಹ್ಯೇಕೇನ ಚಕ್ರೇಣ ನ ರಥಸ್ಯ ಗತಿರ್ಭವೇತ್ ।**
**ಏವಂ ಪುರುಷಕಾರೇಣ ವಿನಾ ದೈವಂ ನ ಸಿದ್ಧ್ಯತಿ ॥**

**ರಥವು ಒಂದು ಚಕ್ರದಿಂದ ಹೇಗೆ ಚಲಿಸಲಾರದೋ ಹಾಗೆಯೇ ಪುರುಷಪ್ರಯತ್ನವಿಲ್ಲದೆ ಕೇವಲ ದೈವದಿಂದ ಏನೂ ಸಿದ್ಧಿಸುವುದಿಲ್ಲ.**

ದೈವದೊಂದಿಗೆ ರಾಜಿಯೆಂದರೆ ದೈವ ಅನುಗಾಲ ನಮ್ಮ ಪ್ರತಿ ಇಚ್ಛೆಯನ್ನೂ ಕರಾರುವಾಕ್ಕಾಗಿ ಪೂರೈಸುತ್ತದೆಯೆಂದು ಅರ್ಥವಲ್ಲ. ದೈವದೊಂದಿಗೆ ರಾಜಿಯೆಂದರೆ ಜೀವನದಲ್ಲಿ ಆಗಾಗ ತಲೆದೋರುವ ಆಶೆನಿರಾಶೆಗಳೆಂಬ ದ್ವಂದ್ವ ತುಡಿತಗಳಿಂದ ಪಲಾಯನವಾದಿಯಾಗದೆ ಬರುವ ಎಡರು ತೊಡರುಗಳನ್ನು ಸ್ಥಿತಪ್ರಜ್ಞನಂತೆ ಎದುರುಗೊಂಡು ಅವನ್ನು ಅಂಗೀಕರಿಸುವ ಒಂದು ವಿಧಾನ. "**ಬಾರದು ಬಪ್ಪದು, ಬಪ್ಪದು ಪೋಗದು**" ಎಂಬ ಕಟುಸತ್ಯದೊಂದಿಗೆ ಮುಖಾಮುಖಿಯಾಗಲು ಪಡೆಯುವ ಮನೋಬಲದ ವಿಸ್ತರಣೆ.

ಈ ರಾಜೀ ಒಪ್ಪಂದದಲ್ಲಿ ನಿರಾಶೆಗೆ ಒಂದಿಷ್ಟೂ ಎಡೆಯಿರದು. ಈ ಮಾತನ್ನೇ ಶ್ರೀಕೃಷ್ಣ ಪರಮಾತ್ಮನು ಭಗವದ್ಗೀತೆಯಲ್ಲಿ ಬೇರೊಂದು ವಿಧದಲ್ಲಿ, **ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ** ಎಂದರೆ ಫಲಾಫಲ ಅಪೇಕ್ಷೆಯನ್ನು ತೊರೆದು ಕರ್ಮವನ್ನು ಆಚರಿಸು ಅನ್ನುತ್ತಾನೆ. ಇದರ ತಾತ್ಪರ್ಯ ಮನುಷ್ಯನು ನಿರಾಶಾವಾದಿಯಾಗಬೇಕೆಂದಲ್ಲ. ಫಲಾಫಲದ ಸಂಪ್ರಾಪ್ತಿ ಆ ಭಗವಂತನಿಗೆ ಸಮರ್ಪಿತವಾದಂತೆ ಮನುಷ್ಯನು ಆಶೆಗಳಿಂದ ದೂರ ಉಳಿದು ನಿಶ್ಚಿಂತನಾಗುತ್ತಾನೆ. ಆಗ ಆಗುಹೋಗುಗಳ ಪರಿಣಾಮ ಗೌಣಸ್ವರೂಪದ್ದಾಗಿ

ನಿರ್ವಿಕಾರ ಭಾವ ವೃದ್ಧಿಸುತ್ತದೆ. ಇದನ್ನೇ ತತ್ವಜ್ಞಾನದ ಪರಿಭಾಷೆಯಲ್ಲಿ ಆತ್ಮಸಮರ್ಪಣೆ ಅನ್ನುತ್ತಾರೆ.

ಆತ್ಮಸಮರ್ಪಣೆ ಯಾವ ಬಗೆಯ ಶಾರೀರಿಕ ದಂಡನೆ ಇಲ್ಲವೆ ಧರ್ಮಾಚರಣೆಯ ಸದ್ದುಗದ್ದಲವಲ್ಲ. ಅದು ಒಂದು ಮಾನಸಿಕ ಸಹಜ ಮಾರ್ಪಾಡು. ವಿನಮ್ರ ಭಾವದ ಒಂದು ಸಂಚಲನೆ. "ನೇತಿ, ನೇತಿ"ಯೆಂಬ ವಿಚಾರ ಮಾಗಿ ಮೂಡುವ ಒಂದು ಒಳಅರಿವು. ಮನೋವಾಕ್ಕಾಯವಾಗಿ ಆ ಭಗವಂತನ ಚರಣಗಳಲ್ಲಿ ಅಧೀನನಾಗುವುದೇ ಆತ್ಮಸಮರ್ಪಣೆಯ ನಿಜ ಸ್ವರೂಪ. ನಾನು, ನನ್ನದು, ನಾನು ಮಾಡುತ್ತಿದ್ದೇನೆ, ನಾನೇ ಕರ್ತನೆಂಬ "ಅಹಂ" ಅಳಿದು ಆ ಸ್ಥಳವನ್ನು ವ್ಯಾಪಿಸುವ ನನ್ನದೇನೂ ಅಲ್ಲ, ನಾನೇನೂ ಮಾಡುತ್ತಿಲ್ಲ, ನನ್ನಿಂದೇನೂ ಆಗದು, ಆದದ್ದು ಮತ್ತು ಆಗುತ್ತಿರುವುದೆಲ್ಲ ಆ ಭಗವಂತನ ಪ್ರೇರಣೆಯಿಂದಲೇ, ಆತನೇ ಕಾರಣಪುರುಷನೆಂದು ಸ್ಫುರಿಸುವ ಪರಿಕಲ್ಪನೆಯೇ ಆತ್ಮಸಮರ್ಪಣೆಯ ಸಾರ.

ಈ ರೀತಿಯ ಭಾವನೆ ಮನಸ್ಸಿನಲ್ಲಿ ಆವಿರ್ಭಾವಗೊಂಡಂತೆ ಹೊಯ್ದಾಡುವ ಮನಸ್ಸು ಸ್ಥಿಮಿತಗೊಂಡು ನಿಶ್ಚಿಂತವಾಗುತ್ತದೆ. ಆಗ ಶ್ರೇಯಸ್ಸು, ಪರಾಭವ, ಪರಾಕು, ಪ್ರತಿಷ್ಠೆ, ಕೀರ್ತಿ, ಅಪಕೀರ್ತಿ ಈ ಎಲ್ಲ ದ್ವಂದ್ವ ವಿದ್ಯಮಾನಗಳು ಕೆಳದರ್ಜೆಯ ಅನಿಸಿಕೆಗಳಾಗಿ ಜೀವನ ಶಾಂತ ಮತ್ತು ಸುಗಮವಾಗುತ್ತದೆ. ಸಾಂಸಾರಿಕ ಹೊರೆಯನ್ನೆಲ್ಲ ಆ ಭಗವಂತನ ಪಾದದಡಿ ಪೇರಿಸಿದಂತೆ ಮನುಷ್ಯನು ಭವಬಂಧನದಿಂದ ಮುಕ್ತನಾಗುತ್ತಾನೆ. ಇಂಥ ಸಮರ್ಪಣಾಭಾವ ಪಡೆದ ಭಕ್ತನನ್ನೇ ಭಗವಂತನೂ ಕೂಡ ಮೆಚ್ಚಿ ಅಪ್ಪಿಕೊಳ್ಳುತ್ತಾನೆಂದು ಭಗವದ್ಗೀತೆಯಲ್ಲಿ ಹೀಗೆ ವಿವರಿಸಲಾಗಿದೆ : **"ಯಾವನು ಹರ್ಷೋಲ್ಲಾಸಿತನಾಗನೋ, ಇತರರನ್ನು ದ್ವೇಷಿಸನೋ, ದುಃಖಿತನಾಗನೋ, ಅಪೇಕ್ಷಾರಹಿತನೋ, ಒಳಿತು ಕೆಡಕು ಕೃತ್ಯಗಳಿಂದ ದೂರವಿರುವನೋ ಮತ್ತು ಪರಿಪೂರ್ಣ ಭಕ್ತನಾಗಿರುವನೋ ಅವನೇ ನನ್ನ ಪ್ರೀತಿಗೆ ಪಾತ್ರನು."** (೧೨.೧೭)

ಭಕ್ತಿಮಾರ್ಗದಲ್ಲಿ ಆತ್ಮಸಮರ್ಪಣೆಗೇ ಹೆಚ್ಚು ಒತ್ತು ಕೊಡಲಾಗಿದೆ. ಭಕ್ತಿಯೆಂದರೆ ದೇವರನ್ನು ಆಶ್ರಯಿಸುವುದು ಎಂದರ್ಥ. ದಾಸರು, ಸಂತರು, ಶರಣರಿಗೆ ಆತ್ಮಸಮರ್ಪಣೆಯಲ್ಲಿಯೇ ದೃಢ ವಿಶ್ವಾಸ. ಸಾಧಕನಿಗೆ ದೇವರ ಬಳಿ ಸೇರಲು ಆತ್ಮಸಮರ್ಪಣೆಯೊಂದೇ ಸಾಕು. ಅದುವೇ ಮೋಕ್ಷಕ್ಕೆ ಸುಲಭ ಹಾಗೂ ಅತ್ಯುತ್ತಮ ಮಾರ್ಗವೆಂದು ಅವರ ನಂಬಿಕೆ. "ನೀನು ಹುಟ್ಟಿಸಿದಲ್ಲಿ ಹುಟ್ಟಿ, ನೀನು ಕೊಂದಲ್ಲಿ ಸಾಯದೆ ಎನ್ನ ವಶವೇನಯ್ಯಾ? ಅಕಟಕಟಾ, ಎನ್ನವನೆನ್ನವನೆನ್ನಯ್ಯಾ ಕೂಡಲಸಂಗಮದೇವಾ" ಎಂದು ಶರಣರು ಆ ಭಗವಂತನಿಗೆ ಸಮರ್ಪಿತರಾಗಿದ್ದಾರೆ.

ದೇವರು ತನ್ನನ್ನು ನೆಚ್ಚಿಕೊಂಡವರಾರನ್ನೂ ಎಂದಿಗೂ ಕೈಬಿಡನೆಂದು ಸಾರಲು ಗತಕಾಲದಲ್ಲಿ ಸಂಭವಿಸಿದ ಅದೆಷ್ಟೋ ನಿದರ್ಶನಗಳು ಸಾಕ್ಷಿಯಾಗಿವೆ. ಮೇವಾಡದ ರಾಣಿ ಮೀರಾಬಾಯಿ ದೇವರನ್ನು ಅದೆಷ್ಟು ನಂಬಿದ್ದಳೆಂದರೆ ಆಕೆಯ ಪತಿ ಅವಳನ್ನು ಕೊಲ್ಲಲು ನೀಡಿದ ವಿಷವನ್ನು ಶ್ರೀಕೃಷ್ಣನಿಗೆ ಸಮರ್ಪಿತವೆಂದು ಸೇವಿಸಿದಾಗ ಅವಳನ್ನು ರಕ್ಷಿಸಿದ್ದು ದೇವರೇ. ಮಹಾರಾಷ್ಟ್ರದ ಸಂತ ಸಖೂಬಾಯಿಯನ್ನು ತನ್ನ ಅತ್ತೆಯಿಂದ ಅನುಭೋಗಿಸುತ್ತಿದ್ದ ತಾಪತ್ರಯಗಳಿಂದ ರಕ್ಷಿಸಲು ಸ್ವತಃ ವಿಠ್ಠಲನೇ ಆಕೆಯ ಮನೆಗೆ ಧಾವಿಸಿ ಮುಸುರೆ ಪಾತ್ರೆಗಳನ್ನು ತೊಳೆದು, ಬಟ್ಟೆಗಳನ್ನು ಶುಭ್ರಗೊಳಿಸಿ, ಹಿಟ್ಟು ಸಹ ಬೀಸಿದ. ಭದ್ರಾಚಲದ ಸಂತ ರಾಮದಾಸ ಸರಕಾರೀ ಹಣವನ್ನು ದುರುಪಯೋಗಗೊಳಿಸಿ ಶ್ರೀರಾಮಚಂದ್ರ, ಸೀತೆ ಮತ್ತು ಲಕ್ಷ್ಮಣರಿಗಾಗಿ ಗುಡಿಯೊಂದನ್ನು ಕಟ್ಟಿಸಿದನೆಂಬ ಆಪಾದನೆಯ ಮೇರೆಗೆ ಅಲ್ಲಿಯ ನವಾಬ ಆತನನ್ನು ಸೆರೆಮನೆಯಲ್ಲಿ ಇರಿಸಿದಾಗ ಸ್ವತಃ ರಾಮನೇ ಮಾರುವೇಷದಲ್ಲಿ ಆಗಮಿಸಿ ಖಜಾನೆಗೆ ಕಟ್ಟಬೇಕಾಗಿದ್ದ ಹಣವನ್ನು ಸಲ್ಲಿಸಿ ರಾಮದಾಸನನ್ನು ಬಂದೀಖಾನೆಯಿಂದ ಮುಕ್ತಗೊಳಿಸಿದ. ಸಂತ ಕಬೀರದಾಸ, ತುಳಸೀದಾಸ, ರಾಮದಾಸ, ಪುರಂದರದಾಸ, ಛೋಕಾಮೇಳಾ, ಕನಕದಾಸ ಮುಂತಾದ ದಾಸರನ್ನು ಕೆಲವೊಂದು ಸಾರಿ ಪರಿಸ್ಥಿತಿ ಇಕ್ಕಟ್ಟಿನಲ್ಲಿ ತಂದಾಗ ಆ ಮಹಾತ್ಮರೆಲ್ಲ ದೇವರ ಅಂತಃಕರುಣೆಯ ಪ್ರಕಾಶದಲ್ಲೇ ಮಿಂದು ಆತನ ಅನುರಾಗದ ಅಡಿಯಲ್ಲೇ ಬಾಳಿ ಬದುಕಿದರು.

> **ಯಾರು ಅತ್ಯಧಿಕ ಸ್ವಪ್ರಯತ್ನ ಮಾಡಿರುವರೋ ಅವರು ಮಾತ್ರ ತಮ್ಮತನವನ್ನು ತ್ಯಜಿಸಿ ಭಗವಂತನಲ್ಲಿ ಸಂಪೂರ್ಣ ಶರಣಾಗಬಲ್ಲರು.**
>
> —*ಸ್ವಾಮಿ ಯತೀಶ್ವರಾನಂದ*

ಪ್ರಸ್ತುತ ಕಾಲದಲ್ಲೂ ಕೂಡ ಅಂತಹ ಎಷ್ಟೋ ನಿದರ್ಶನಗಳು ಕಂಡುಬಂದಿವೆ. ಸ್ವಾಮಿ ವಿವೇಕಾನಂದರು ಪರಿವ್ರಾಜಕರಾಗಿ ಹಿಂದೂಸ್ಥಾನದ ಪರಿಭ್ರಮಣೆಗೈಯುವಾಗ ಅವರ ಬಳಿ ಇದ್ದದ್ದು ಕೇವಲ ಒಂದು ನೀರಿನ ಪಾತ್ರೆ ಮತ್ತು ಒಂದು ಕೋಲು ಮಾತ್ರ. ಆಗ ಅವರು ಹಣವನ್ನು ಮುಟ್ಟುವುದಿಲ್ಲ ಮತ್ತು ಮನೆಮನೆಗೆ ಹೋಗಿ ಭಿಕ್ಷೆ ಕೇಳುವುದಿಲ್ಲವೆಂದು ಪಣತೊಟ್ಟಿದ್ದರು. ತಾನಾಗಿಯೇ ಏನಾದರೂ ಒದಗಿ ಬಂದದ್ದನ್ನು ಮಾತ್ರ ಸ್ವೀಕರಿಸುತ್ತಿದ್ದರು. ಒಮ್ಮೆ ಅವರಿಗೆ ತಾವು ಸಂಸಾರಿಗಳಿಗೆ ವೃಥಾ ಭಾರವಾಗಿದ್ದೇವೆ ಎಂಬ ವಿಚಾರ ಬಂದು ಅವರು ಗೊತ್ತು ಗುರಿಯಿಲ್ಲದೆ ನಡೆಯುತ್ತ ಹೋಗಿ ಒಂದು ನಿಬಿಡಾರಣ್ಯವನ್ನು ಸೇರಿದರು. ಹೊಟ್ಟೆಗಿಲ್ಲದೆ ಬಳಲಿದ ಅವರು ಒಂದು ಮರದ ಅಡಿಯಲ್ಲಿ ಕುಳಿತಾಗ ಒಂದು ಹೆಬ್ಬುಲಿ ಅವರ ಎದುರಿಗೆ ಬಂದು ಕುಳಿತಿತು. "ಆಯಿತು, ಇಂದು ನಾನು ಈ ಹುಲಿಗೆ ಆಹಾರವಾಗಿ ನನ್ನ

ಜೀವನ ಸಾರ್ಥಕವಾಗುತ್ತೆ" ಎಂದು ಭಾವಿಸಿದ ಅವರು ಆ ಸ್ಥಳವನ್ನು ಬಿಟ್ಟು ಕದಲಲಿಲ್ಲ. ಆ ಹುಲಿ ಸ್ವಲ್ಪ ಸಮಯ ಹಾಗೇ ಕುಳಿತು ಅಲ್ಲಿಂದ ನಿರ್ಗಮಿಸಿತು. ದೇವರನ್ನೇ ನಂಬಿ ಹೊರಟ ಅವರಿಗೆ ದೇವರು ಕಾಲಕಾಲಕ್ಕೆ ಅವರ ಯೋಗಕ್ಷೇಮವನ್ನು ವಹಿಸುತ್ತ ಅವರಿಗೆ ಆಗಿನ ಕಾಲದ ರಾಜರು ಮಹಾರಾಜರ ವತಿಯಿಂದಲೂ ಆದರಾತಿಥ್ಯಗಳನ್ನು ಒದಗಿಸಿದ.

ಅದೇ ರೀತಿ ಕಾಸರಗೋಡು ಬಳಿಯ ಆನಂದಾಶ್ರಮದ ಸ್ವಾಮಿ ರಾಮದಾಸರು ರಾಮನ ಕಿಂಕರರಾಗಿ ದೇವರ ಮೇಲೆ ಭಾರಹಾಕಿ ಬರಿಗೈಯಲ್ಲೇ ಕಾಲ್ನಡಿಗೆಯಲ್ಲಿ ಒಬ್ಬಂಟಿಗರಾಗಿ ಹಿಂದುಸ್ಥಾನವನ್ನು ಸುತ್ತುವಾಗ ದೇವರು ಅವರ ಕೈಬಿಡಲಿಲ್ಲ. ಹೀಗೆ ಅನೇಕ ಆಧುನಿಕ ಸಂತರೂ ಕೂಡ ಆತ್ಮಸಮರ್ಪಣಾ ಭಾವದಿಂದಲೇ ದೇವರ ಸಾನುರಾಗ ಪ್ರೀತಿ ಪಡೆದು ಸಂಸಾರ ಸಾಗರವನ್ನು ದಾಟಿದ್ದಾರೆ.

ಆತ್ಮಸಮರ್ಪಣೆಯೆಂದರೆ ನದಿ ಸಾಗರವನ್ನು ಸೇರಿ ತನ್ನ ಅಸ್ತಿತ್ವವನ್ನೇ ಕಳೆದುಕೊಂಡಂತೆ. ಆಗ ಜೀವಾತ್ಮನ ಸಂಕಲ್ಪಗಳೆಲ್ಲ ಪರಮಾತ್ಮನ ಸಂಕಲ್ಪದಲ್ಲಿ ಲೀನವಾಗಿ ಸಾಧಕನಿಗೆ ಬಂದೊದಗುವ ಸುಖದುಃಖ, ಕಷ್ಟಸುಖಗಳೆಲ್ಲ ಆ ಭಗವಂತನ ಲೀಲೆಯೆಂದು ಗೋಚರಿಸಿ ಅವನು ಪ್ರಪಂಚದ ಬಂಧನಗಳಿಂದ ವಿಮುಕ್ತಿ ಪಡೆಯುತ್ತಾನೆ. ಈ ಆತ್ಮಸಮರ್ಪಣಾಭಾವ ಮನುಷ್ಯನ ಹೃದಯದಲ್ಲಿ ಅಂಕುರಿಸಲು ಎರಡು ಸಂಗತಿ ಅಗತ್ಯ. ಒಂದು ದೇವರಿದ್ದಾನೆಂಬ ದೃಢ ವಿಶ್ವಾಸ, ಮತ್ತೊಂದು ಅತನು ಮಾಡುವುದೆಲ್ಲ ನಮ್ಮ ಒಳಿತಿಗಾಗಿಯೇ ಎಂಬ ಭರವಸೆ. ಆ ನಂಬಿಕೆ ಶ್ರದ್ಧೆಯ ರೂಪ ತಾಳಿದಾಗ ಆವಿರ್ಭವಿಸುವ ಚಿಂತನೆಯೇ ಭಕ್ತಿ. ಹಾಗೆ ಪ್ರಾದುರ್ಭಾವಗೊಳ್ಳುವ ಭಕ್ತಿಯೇ ಆತ್ಮಸಮರ್ಪಣೆಯ ಶ್ರೇಷ್ಠ ಪ್ರಕಾಶ.

ಪ್ರಸ್ತುತ ಕಾಲದಲ್ಲಿ, ನೀಗಲಾರದ ಅದೆಷ್ಟೋ ಸಮಸ್ಯೆಗಳ ಭಾರ ತಲೆಯಮೇಲೆ ಹೊತ್ತು, ಇತ್ತ ಬದುಕಲಾರದೆ ಅತ್ತ ಸಾಯಲಾರದೆ ಮಾನಸಿಕ ಉದ್ರೇಕತೆಯಿಂದ ನರಳುತ್ತ ತ್ರಿಶಂಕು ಸ್ವರ್ಗ ಅನುಭವಿಸುತ್ತಿರುವ ಅನೇಕ ಆಧುನಿಕ ಮಾನವರಿಗೆ ಮನಸ್ಸಿನ ಸಾಂತ್ವನ ಪಡೆಯಲು ಆತ್ಮಸಮರ್ಪಣೆ ಒಂದು ತಾರಕ ಮಂತ್ರವಾಗಿ ಫಲಪ್ರದವಾಗುವುದರಲ್ಲಿ ಎರಡು ಮಾತಿಲ್ಲ.

✤

## ಪ್ರಹಸನ ಪ್ರಸಂಗ

ಈ ಪ್ರಪಂಚದಲ್ಲಿ ಕೆಲವರು ಇತರರ ದುಃಖವನ್ನು ನಿವಾರಿಸಲು ಪ್ರಯತ್ನಿಸುತ್ತಾರೆ. ಮತ್ತೆ ಕೆಲವರು ಇತರರ ದುಃಖದ ಪ್ರಯೋಜನವನ್ನು ಪಡೆದು ತಮ್ಮ ಸ್ವಾರ್ಥವನ್ನು ಸಾಧಿಸುತ್ತಾರೆ. ಇತರರ ದುಃಖವನ್ನು ನಿವಾರಿಸಬೇಕಾದವರೆ ಈ ರೀತಿ ಸ್ವಾರ್ಥಸಾಧಕರಾದರೆ ಅವರನ್ನು ಅಸುರರ ಅಪರಾವತಾರವೆಂದೇ ಕರೆಯಬೇಕು..

ಒಬ್ಬ ವೈದ್ಯನು ರಜ ತೆಗೆದುಕೊಂಡು ಪರ ಊರಿಗೆ ಹೋಗಬೇಕಿತ್ತು. ಆಗ ತಾನೆ ವೈದ್ಯಕೀಯ ಪದವಿಯನ್ನು ಪಡೆದಿದ್ದ ತನ್ನ ಮಗನಿಗೆ ತನ್ನ ಕೆಲಸವನ್ನು ವಹಿಸಿಹೋದನು. ಹಿಂದಿರುಗಿ ಬಂದ ಮೇಲೆ, "ಕೆಲಸ ಹೇಗೆ ನಡೆಯುತ್ತಿದೆ?"ಎಂದು ಮಗನನ್ನು ವಿಚಾರಿಸಿದ.

ಮಗನು ಉತ್ಸಾಹದಿಂದ ಹೇಳಿದ: "ಅಪ್ಪ, ನಿನಗೆ ಆ ಸಿದ್ದಪ್ಪ ಮತ್ತು ನಾಗಪ್ಪ ಗೊತ್ತಲ್ಲವೆ? ಅವರು ನಿನ್ನಿಂದ ಬಹಳ ವರ್ಷಗಳಿಂದ ಚಿಕಿತ್ಸೆ ಪಡೆಯುತ್ತಿದ್ದರು. ಆದರೆ ನನ್ನ ಔಷಧಿಯಿಂದ ಒಂದೇ ವಾರದಲ್ಲಿಯೇ ಅವರ ರೋಗ ವಾಸಿಯಾಯಿತು."

ತಂದೆಯು ಹೇಳಿದ: "ಹೌದೆ! ಛೆ! ಇಷ್ಟು ವರ್ಷ ನಿನ್ನ ಶಿಕ್ಷಣಕ್ಕೆ ಹಣ ಒದಗಿಸುತ್ತಿದ್ದವರು ಯಾರೆಂದು ನಿನಗೆ ಗೊತ್ತೇನು!"

❖ ❖ ❖

ನಮಗೆ ಕಷ್ಟ ಸಂಕಟಗಳು ಬಂದಾಗ ಅವು ಭಗವಂತನ ಪ್ರೀತಿಯ ಕೊಡುಗೆಗಳು ಎಂದು ಪರಿಗಣಿಸಬೇಕು ಎಂದು ಉಪದೇಶಿಸಲಾಗುತ್ತದೆ. ಅವೆಲ್ಲ ಬರುವುದು ನಮ್ಮ ಪಾಪವನ್ನು ತೊಳೆಯುವುದಕ್ಕೆ ಎಂದೂ ಹೇಳಲಾಗುತ್ತದೆ. ಆದರೆ ಈ ಉಪದೇಶ ಎಲ್ಲರಿಗೂ ಅನ್ವಯಿಸದೆ ಇರಬಹುದು. ಆಧ್ಯಾತ್ಮಿಕ ಸಾಧಕರಿಗೆ ಮತ್ತು ಶರಣಾಗತಿಯ ಭಾವವುಳ್ಳವರಿಗೆ ಇಂತಹ ಉಪದೇಶಗಳು ಸಮಾಧಾನವನ್ನು ನೀಡಬಹುದು. ಆದರೆ ದೃಢವಾದ ಅಧ್ಯಾತ್ಮಶ್ರದ್ಧೆ ಇಲ್ಲದವರಿಗೆ ಇಂತಹ ಉಪದೇಶ ಅವರ ನೋವನ್ನು ಇನ್ನೂ ಹೆಚ್ಚಿಸಬಹುದು. ಆದ್ದರಿಂದ ಅವರವರ ಮನೋಭಾವಕ್ಕೆ ತಕ್ಕಂತೆ ಸಮಾಧಾನವನ್ನು ನೀಡಬೇಕು.

ಓರ್ವ ಬಾಲಕ ತುಂಬ ಕಾಯಿಲೆಯಿಂದ ನರಳುತ್ತಿದ್ದ. ಕ್ರೈಸ್ತ ಪಾದ್ರಿಯೊಬ್ಬನು ಅವನಿಗೆ ಈ ರೀತಿ ಸಮಾಧಾನ ನೀಡಿದನು: "ನೋಡು ಮಗು, ಭಗವಂತನು ಕಷ್ಟವನ್ನು ಕಳಿಸುತ್ತಿರುವುದಕ್ಕಾಗಿ ನೀನು ಸಂತೋಷ ಪಡಬೇಕು. ಈ ಕಷ್ಟಗಳೆಲ್ಲ ಯೇಸುಕ್ರಿಸ್ತನ ಚುಂಬನಗಳು."

ಬಾಲಕ ಹೇಳಿದ : "ಹಾಗಾದರೆ ನನ್ನನ್ನು ಇಷ್ಟೊಂದು ಚುಂಬಿಸುವುದು ಬೇಡವೆಂದು ಯೇಸುಕ್ರಿಸ್ತನಿಗೆ ದಯವಿಟ್ಟು ಹೇಳಿ."

❖ ❖ ❖

ವ್ಯಕ್ತಿಯೊಬ್ಬನು, "ನಿನ್ನ ತಂದೆಗೆ ವಯಸ್ಸೆಷ್ಟು?" ಎಂದು ಒಬ್ಬ ಬಾಲಕನನ್ನು ಕೇಳಿದನು.

"ಅವನಿಗೆ ನನ್ನಷ್ಟೇ ವಯಸ್ಸು."

"ಅದು ಹೇಗೆ ಸಾಧ್ಯ?"

"ಅವನು ತಂದೆಯಾದದ್ದು ನಾನು ಹುಟ್ಟಿದ ನಂತರವೇ."